

# ಚಿತ್ತಾಕರ್ಷಕ ಕೆಂದಲೆ ಗಿಳಿ

ಚಿತ್ರ– ಬರಹ:
**ಎಂ.ಆರ್. ಮಂಜುನಾಥ್**

ಹಕ್ಕಿಗಳು ಪುಟ್ಟದಿರಲಿ, ದೊಡ್ಡದಿರಲಿ ಪ್ರಕೃತಿಯ ಅದ್ಭುತ ಸೃಷ್ಟಿ ಎಂಬುದರಲ್ಲಿ ಸಂಶಯವಿಲ್ಲ. ಹಕ್ಕಿಗಳ ಇಂಚರ, ಚೈತನ್ಯದಾಯಕ ಹಾರಾಟ, ಆಕರ್ಷಕ ವರ್ಣಸೌಂದರ್ಯ – ನಿತ್ಯವೂ ನಿಸರ್ಗಕ್ಕೆ ಜೀವ ತುಂಬುತ್ತವೆ.

ಹಕ್ಕಿಗಳಲ್ಲಿ ಅಪರೂಪವಾಗಿರುವ ಕೆಂದಲೆ ಗಿಳಿಗಳನ್ನು ಹುಡುಕಿಕೊಂಡು ಸುಮಾರು ವರ್ಷ ಕಾಡು ಮೇಡುಗಳನ್ನು ಸುತ್ತಿದ್ದೆ. ಕೊನೆಗೂ ಬಂಡಿಪುರ ಅರಣ್ಯದಲ್ಲಿ ಕ್ಯಾಮೆರಾ ಕಣ್ಣಿಗೆ ಅವು ಸೆರೆ ಸಿಕ್ಕಿದ್ದು ವಿಶೇಷ.

ಈ ಗಿಳಿಗಳಲ್ಲಿ ಸಾಮಾನ್ಯ ಗಿಳಿ (ರೋಸ್–ರಿಂಗ್ಡ್ ಪ್ಯಾರೆಕೀಟ್), ಮಲೆಗಿಳಿ (ಮಲಬಾರ್ ಪ್ಯಾರಕೀಟ್), ರಾಮಗಿಳಿ (ಅಲೆಕ್ಯಾಂಡ್ರಿನ್ ಪ್ಯಾರಕೀಟ್), ಚಿಟ್ಟುಗಿಳಿ (ಇಂಡಿಯನ್ ಹ್ಯಾಂಗಿಂಗ್ ಪ್ಯಾರಕೀಟ್) ಹೀಗೆ ಹಲವು ಪ್ರಬೇಧಗಳಿವೆ. ಇವುಗಳ ಪೈಕಿ ಕೆಂದಲೆ ಗಿಳಿಗಳು ತುಂಬಾ ಅಪರೂಪ ಮಾತ್ರವಲ್ಲ, ಆಕರ್ಷಕವೂ ಹೌದು.

ಕೆಂದಲೆ ಗಿಳಿಗಳು ಮೂಲತಃ ಈಶಾನ್ಯ ಭಾರತದ್ದು. ಆಗ್ನೇಯ ಏಷ್ಯಾದೆಲ್ಲೆಡೆ ಇವು ಹರಡಿವೆ. ‘ಸಿಟ್ಟಾಕುಲಾ ಸಯನೋಸೆಫಾಲಾ’ ಕುಟುಂಬಕ್ಕೆ ಸೇರಿವೆ. ಗೊರವಂಕ ಗಾತ್ರದ ಉದ್ದ ಬಾಲದ ಹಸಿರು ಪಕ್ಷಿ ಇದಾಗಿದ್ದು, ಗಂಡು ಹಕ್ಕಿಗಳ ತಲೆ ಕೆಂಪು ಬಣ್ಣದ್ದು. ಗದ್ದವು ಕಪ್ಪು ಬಣ್ಣದಿಂದ ಕೂಡಿರುತ್ತದೆ. ಮೊನಚಾದ ಹಳದಿ ಕೊಕ್ಕು, ಕೆಂಪು ಭುಜ, ಹಸಿರು– ನೀಲಿ ಮಿಶ್ರಿತ ಬಣ್ಣದ ಬಾಲದ ಗರಿಗಳು, ಬಾಲದ ತುದಿಯಲ್ಲಿ ಬಿಳಿ ಬಣ್ಣದ ಕುಂಚ– ಈ ಹಕ್ಕಿಗಳ ವಿಶೇಷ.

ಹೆಣ್ಣು ಹಕ್ಕಿಗಳಲ್ಲಿ ವಯಸ್ಕ ಹಕ್ಕಿಗಳು ತಲೆಯಲ್ಲಿ ನಸುಕಂದು ಬಣ್ಣ ಹೊಂದಿರುತ್ತವೆ. ಇವುಗಳಿಗೆ ಕುತ್ತಿಗೆಯ ಕಪ್ಪು ಪಟ್ಟಿಯಾಗಲೀ ಅಥವಾ ಭುಜದ ಕೆಂಪು ಮಚ್ಚೆಯಾಗಲಿ ಇರುವುದಿಲ್ಲ. ಯುವ ಪಕ್ಷಿಗಳು ಹಸಿರು ತಲೆಯನ್ನು ಹೊಂದಿದ್ದು ಕುತ್ತಿಗೆಯ ಸುತ್ತ ಕಪ್ಪು ಪಟ್ಟಿ ಇರುತ್ತದೆ.

ಕೆಂದಲೆ ಗಿಳಿಗಳು ಸುಮಾರು 30 ಸೆಂ.ಮಿ ಉದ್ದ ಬೆಳೆಯುತ್ತವೆ. ಇದರಲ್ಲಿ ಬಾಲದ ಉದ್ದವೇ ಸುಮಾರು 18 ಸೆಂ.ಮೀ ಇರುತ್ತದೆ. 75ರಿಂದ 85 ಗ್ರಾಂವರೆಗೆ ತೂಕ. ಹೆಣ್ಣು ಹಕ್ಕಿಗಳು ವಯಸ್ಕ ಗರಿಗಳನ್ನು ಪಡೆಯಲು 15 ತಿಂಗಳು ತೆಗೆದುಕೊಂಡರೆ, ಗಂಡು ಹಕ್ಕಿಗಳಿಗೆ 30 ತಿಂಗಳು ಬೇಕಾಗುತ್ತವೆ. ಭಾರತ, ಬಾಂಗ್ಲಾದೇಶ, ಭೂತಾನ್ ಕಾಂಬೋಡಿಯಾ, ಚೀನಾ, ಮ್ಯಾನ್ಮಾರ್, ನೇಪಾಳ, ಥಾಯ್ಲೆಂಡ್ ಮತ್ತು ವಿಯೆಟ್ನಾಂ ಕಾಡುಗಳಲ್ಲಿ ಕಂಡು ಬರುತ್ತವೆ.

ಇವು ಹಣ್ಣು, ತರಕಾರಿ ಹೂವು, ದವಸ ಧಾನ್ಯಗಳ ಚಿಗುರು, ಕೆಲವೊಮ್ಮೆ ಹುಲ್ಲಿನ ಚಿಗುರನ್ನೂ ತಿನ್ನುತ್ತವೆ. ಭಾರತದಲ್ಲಿ ಇವುಗಳ ಸಂತಾನೋತ್ಪತ್ತಿಯ ಕಾಲ ಡಿಸೆಂಬರ್‌ನಿಂದ ಏಪ್ರಿಲ್. ಸಾಮಾನ್ಯವಾಗಿ ಮರಗಳ ಪೊಟರೆಗಳಲ್ಲಿ ಗೂಡು ಕಟ್ಟುತ್ತವೆ. 4 ರಿಂದ 6 ಬಿಳಿ ಮೊಟ್ಟೆಗಳಿಗೆ ಸುಮಾರು 22ರಿಂದ 25 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ. ಮರಿಗಳು 7 ರಿಂದ 8 ವಾರಗಳವರೆಗೆ ಗೂಡಿನಲ್ಲೇ ಇರುತ್ತವೆ. ನಂತರ 2ರಿಂದ 3 ವಾರ ಪೋಷಕ ಗಿಳಿಗಳ ಆಶ್ರಯದಲ್ಲಿ ಬೆಳೆದು ಸ್ವತಂತ್ರವಾಗುತ್ತವೆ. ಆಯಸ್ಸು ಸುಮಾರು 17 ವರ್ಷ. ಕರ್ನಾಟಕದ ಬಂಡಿಪುರ, ಬಿಳಿಗಿರಿ ಬೆಟ್ಟ, ಬನ್ನೇರುಘಟ್ಟ, ದರೋಜಿ, ದಾಂಡೇಲಿಯಲ್ಲಿ ಈ ಗಿಳಿಗಳನ್ನು ಕಾಣಬಹುದು.

